ಶ್ರೀ ಟಿ. ತಾರೇ ಗೌಡ.—ಈ ಸೇತುವೆ ಆಗದೆ ಇರುವುದರಿಂದ ತಿಮ್ಮನಹಳ್ಳಿ, ಬದಕೆ ಗೊಡ್ಡು ಮೊದಲಾದ 8—10 ಗ್ರಾಮದ ಜನರಿಗೆ ಗೊಬ್ಬರ, ಸರಕು ಸಾಗಾಣಿಕೆಗೆ ಬಹಳ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದಲೇ? ಈ ಸೇತುವೆ ಆದರೆ ಸಿರಾ, ಚಿಕ್ಕನಾಯಕನ ಹಳ್ಳಿಗೆ ನೇರ ಮಾರ್ಗವಾಗಿ ಅದರ ದೂರ 15 ಮೈಲಿ ಕಡಮೆಯಾಗುತ್ತದೆ. ಅದನ್ನು ಪರಿಶೀಲಿಸಿ ಜಾಗ್ರತೆ ಎಸ್ಟಿಮೇಟ್ ಮಂಜೂರು ಮಾಡಲಾಗುತ್ತದೆಯೇ ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರಿಗೆ ಇದರಿಂದ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನದಲ್ಲಿದೆ. ಈ ಸೇತುವೆ ಮಾಡುವುದರಿಂದ ಜನಗಳಿಗೆ ಹೆಚ್ಚಿನ ಉಪಯೋಗ ವಾಗುತ್ತದೆ ಎನ್ನುವಕ್ಕದ್ದೂ ಸರ್ಕಾರದ ಗಮನದಲ್ಲಿದೆ.

ಶ್ರೀ ಎಂ. ಎಚ್ ಜಯಪ್ರಕಾಶ ನಾರಾಯಣ್.—ಅತ್ಯಂತ ಬಡವರಿಗೆ ತೊಂದರೆಯಾಗುತ್ತದೆ, ಸುತ್ತಮುತ್ತ ಇರತಕ್ಕ ಸಣ್ಣಪುಟ್ಟ ರೈತರು ಬಹಳ ತೊಂದರೆ ಪಡುತ್ತಿದ್ದಾರೆ. ಹಣ ಲಭ್ಯವಾದಾಗ ಮಾಡುವುದಾಗಿ ಹೇಳಿದ್ದಾರೆ. ಟಾಪ್ ಪ್ರಯಾರಿಟಿ ಕೊಟ್ಟು ಈ ಸೇತುವೆ ಕೆಲಸವನ್ನು ತೆಗೆದು ಕೊಳ್ಳುತ್ತಾರೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ರೈತರಿಗೆ ತೊಂದರೆಯಾಗತಕ್ಕ ಎಲ್ಲಿ ವಿಚಾರಗಳಲ್ಲಿಯೂ ಟಾಪ್ ಪ್ರಯಾರಿಟಿ ಕೊಡಬೇಕು ಎನ್ನುವುದು ಸರ್ಕಾರದ ಅಭಿಪ್ರಾಯವಾಗಿದೆ. ಹಣದ ಮಿತಿ ನೋಡಿಕೊಂಡು ಯಾವ ಯಾವದಕ್ಕೆ ಎಷ್ಟೆಷ್ಟು ಟಾಪ್ ಪ್ರಯಾರಿಟಿ ಕೊಡಬೇಕು ಎಂದು ವಿಚಾರ ಮಾಡಲಾಗುತ್ತದೆ.

ಶ್ರೀ ಟಿ. ತಾರೇಗೌಡ.—ಕಳ್ಳಂಬೆಳ್ಳಕ್ಕೆ ಹೋದ ತಿಂಗಳು ಮಂತ್ರಿಗಳು ದಯಮಾಡಿಸಿದ್ದಾಗ ಕೆರೆ ಒಡೆದು ಪ್ರವಾಹದಿಂದ ನಷ್ಟವಾದುದನ್ನು ನೋಡಿದ್ದಾರೆ. ಅಲ್ಲಿಯ ಜನಗಳೂ ಕೇಳುತ್ತಿದ್ದಾರೆ. ಚಿತ್ರದುರ್ಗ-ಬೆಂಗಳೂರು ಹೈವೇ ಮತ್ತು ಸಿರಾ-ಪೆನುಕೊಂಡ ಫ್ಲೈಟ್ ಪಾಂಡ್ ನೋಡಿಕೆ ಈ ಒಂದು ಸೇತುವೆ ಆಗುವುದರಿಂದ ಕನೆಕ್ಷನ್ ಸಿಕ್ಕುವುದರಿಂದ, ಜನಗಳಿಗೆ ತೊಂದರೆ ತಪ್ಪುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಬಂದು ನೋಡಿದ್ದೇನೆ. ಅಲ್ಲಿನ ಅವಶ್ಯಕತೆ ಏನಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಇದು ನಾನ್ ಪಿ. ಡಬ್ಲ್ಯು. ಡಿ. ರಸ್ತೆ. ಆದುದರಿಂದ ಈ ಕೆಲಸವನ್ನು ತೆಗೆದುಕೊಂಡು ಜನಗಳಿಗೆ ಅನುಕೂಲ ಮಾಡಿಕೊಡುವ ಬಗ್ಗೆ ಹೇಗೆ ಎಂದು ಯೋಚನೆ ಮಾಡುತ್ತಿದ್ದೇವೆ.

Non-Completion of Irrigation Schemes in Shimoga Taluk

81. Sri S. M. CHANDRASHEKHAR (Hosanagar).—

Will the Minister for Public Works and Electricity be pleased to state :—

(*a*) the reasons for non-completion of the work of irrigation schemes at Kadale Oddu, Sigehalla in Shimoga Taluk ;

(*b*) the reasons for delay in commencing the work of the Upper Tunga Project ;

(*c*) the steps taken by the Government to commence the work immediately ?

Sri H.M. CHANNABASAPPA (Minister for Public Works). —

(*a*) The technical feasibility of bringing more area under irrigation is under consideration. The work will be completed as early as possible.

† Indicates that the remarks or speeches have not been revised by the member concerned.

(b) As the dispute relating to distribution of Krishna Godavari waters is pending before the Tribunal, the construction of this project will be considered after the Tribunal's award.

(c) The work will be commenced immediately after sanction is accorded and money is made available.

ಶ್ರೀ ಎಸ್. ಎಂ. ಚಂದ್ರಶೇಖರ್.—(ಅ) ಭಾಗಕ್ಕೆ ಉತ್ತರ ಕೊಟ್ಟಿದ್ದೀರಿ. ಕೆಲವು ರಾಜಕೀಯ ಒತ್ತಡದಿಂದ ಸೀಗೆಹಳ್ಳ ಪ್ರಾಜೆಕ್ಟ್ ಪುನಃ ಪರಿಶೀಲನೆಗೆ ಹೋಗಿದೆ, ಏಳೆಂಟು ವರ್ಷಗಳು ಹಿಂದೆ 11.5 ಲಕ್ಷ ರೂಪಾಯಿಗಳಿಗೆ ಅಂದಾಜಾಗಿತ್ತು ಎಂದು ಹೇಳುತ್ತೇನೆ. ಈ ವಿಚಾರ ಮಾನ್ಯ ಮಂತ್ರಿಗಳಿಗೇನಾದರೂ ಗೊತ್ತಿದೆಯೇ?

†ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ವಿಚಾರ ಗೊತ್ತಿದೆ. ಆದರೆ ರಾಜಕೀಯ ಒತ್ತಡಕ್ಕೆ ಇರಿಗೇಷನ್ ಕಾಮಗಾರಿಗಳು, ರಸ್ತೆ ಕಾಮಗಾರಿಗಳು ಮತ್ತು ಪಿ.ಡಬ್ಲ್ಯು.ಡಿ. ಕಾಮಗಾರಿಗಳ ಮಣಿಯುವುದಿಲ್ಲ. ಇಷ್ಟು ಮಾತ್ರ ಅಶ್ವಾಸನೆಯನ್ನು ಕೊಡಬಲ್ಲೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಹಿಂದೆ ರಾಜಕೀಯ ಒತ್ತಡದಿಂದ ನಿಂತು ಹೋಯಿತು ಎನ್ನುವುದು ಗೊತ್ತಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾಂತ್ರಿಕ ವಿಚಾರಗಳಿಗೋಸ್ಕರ, ಪರಿಶೀಲನೆಗೋಸ್ಕರ ತಡವಾಗುತ್ತಿದೆ. ರಾಜಕೀಯ ಒತ್ತಡಗಳಿಂದಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಚಂದ್ರಶೇಖರ್.—ಈ ಬಗ್ಗೆ ಪುನರ್ಪರಿಶೀಲನೆ ಮಾಡುತ್ತಾರೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅಗತ್ಯವಾಗಿ ಮಾಡೋಣ.

ಶ್ರೀ ಎಸ್. ಎಂ. ಚಂದ್ರಶೇಖರ್.—(ಅ) ಭಾಗಕ್ಕೆ ಕೊಟ್ಟಿರುವ ಉತ್ತರದಲ್ಲಿ ಕೃಷ್ಣಾ ಜಲ ವಿವಾದವಿರುವುದರಿಂದ ತುಂಗ ಮೇಲ್ಡಂಡೆ ಯೋಜನೆಯನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ ವೆಂದು ಹೇಳಿದ್ದಾರೆ. ಇದಾಂ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಸ್ವಾಮಿ?

ಶ್ರೀ ಎಚ್. ಎಂ. ಚನ್ನಬಸಪ.—ಇದಾಂ ಸಾಬಿಗೂ ಗೋಕುಲಾಷ್ಟಮಿಗೂ ಸಂಬಂಧವಿದೆ. ಕೃಷ್ಣಾ ಗೋದಾವರಿ ನೀರಿಗೆ ಸಂಬಂಧಪಟ್ಟಂತೆ ಈ ತುಂಗ ನದಿ ನೀರು ಕೃಷ್ಣಾ ನದಿಗೆ ಸೇರುತ್ತದೆ. ಅದು ಮಾನ್ಯ ಸದಸ್ಯರಿಗೂ ಗೊತ್ತಿರಬಹುದು.

ಶ್ರೀ ಎಸ್. ಎಂ. ಚಂದ್ರಶೇಖರ್.—ಅಪ್ಪರ್ ತುಂಗ ಪ್ರಾಜೆಕ್ಟ್ ಮಾಡುವುದರಿಂದ ಅದಕ್ಕೆ ಏನು ತೊಂದರೆ ಇದೆ ಸ್ವಾಮಿ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣಾ ನದಿ ನೀರಿಗೆ ಸಂಬಂಧಪಟ್ಟಂತೆ ತುಂಗ ನೀರು, ಭದ್ರ ನೀರು ಮತ್ತು ಕೃಷ್ಣಾ ನದಿಗೆ ಹೋಗತಕ್ಕ ಹಳ್ಳ ಕೊಳ್ಳ ದೊಡ್ಡದು ಚಿಕ್ಕದು ಎಲ್ಲವು ಕೃಷ್ಣಾ ನದಿ ವಿವಾದಕ್ಕೆ ಸಂಬಂಧಪಟ್ಟುವೇ ಆಗಿವೆ.

ಶ್ರೀ ಕೋಣಂದೂರು ಲಿಂಗಪ್ಪ.—ತುಂಗ ಮೇಲ್ಡಂಡೆ ಯೋಜನೆಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಬಹಳ ಭಾರಿ ವಿರೋಧವಿದೆ ಜನರಿಗೆ ಬಹಳ ತೊಂದರೆಯಾಗುತ್ತದೆ. ಶರಾವತಿ ಯೋಜನೆ, ತುಂಗ ಅಣೆಕಟ್ಟು ಮಾಡಿ ಜಾಣತನದಿಂದ ಮುಳೆನಾಡನ್ನು ಮುಳುಗಿಸುವ ಪ್ರಯತ್ನ ಮಾಡುತ್ತಿದ್ದೀರೆಂದು ಅಭಿಪ್ರಾಯವಿದೆ. ಇದಕ್ಕೆ ತೀವ್ರ ವಿರೋಧವಿದೆ. ಆದ್ದರಿಂದ ಇದನ್ನು ಕೈ ಬಿಡಲಿಕ್ಕೆ ಸಾಧ್ಯವೇ? ಬಿಡುತ್ತೀರಾ? ಬಿಡಬೇಕು.

ಶ್ರೀ ಎಚ್. ಎಂ. ಚನ್ನಬಸಪ್ಪ.—ನೀರಾವರಿ ಯೋಜನೆಗಳನ್ನು ಮಾಡುವಾಗ ಯಾರಿಂದ ವಿರೋಧ, ಯಾರಿಂದ ಪ್ರೋತ್ಸಾಹ ಬರುತ್ತದೆ ಎನ್ನುವುದು ನಮಗೆ ಸಂಬಂಧಪಟ್ಟುದಲ್ಲ. ಆ ಯೋಜನೆಗಳಿಂದ ಎಷ್ಟು ಜನಗಳಿಗೆ ಅನುಕೂಲವಾಗುತ್ತದೆ, ಎಷ್ಟು ನಷ್ಟವಾಗುತ್ತದೆ, ಎಷ್ಟು ರಾಭವಾಗುತ್ತದೆ ಎನ್ನುವುದನ್ನು ನೋಡಿ ನೀರಾವರಿ ಯೋಜನೆಗಳನ್ನು ಮಾಡುತ್ತೇವೆಯೇ ವಿನಾ ಯಾರಿಂದ ವಿರೋಧವಿದೆ, ಯಾರಿಂದ ಸಪೋರ್ಟ್ ಬರುತ್ತದೆ ಎನ್ನುವುದು ಕಾರಣವಲ್ಲ.

ಶ್ರೀ ಕೆ. ಎನ್. ವೀರಪ್ಪ ಗೌಡ.— ತುಂಗ ಮೇಲ್ದಂಡೆ ಯೋಜನೆ ಮಾಡುವುದರಿಂದ ಬಹಳ ಬೆಲೆ ಬಾಳತಕ್ಕ ಜಮೀನು, ಅರಣ್ಯ ಪ್ರದೇಶ ಮುಳುಗುವುದರ ಜೊತೆಗೆ ಶೃಂಗೇರಿ ತಾಲ್ಲೂಕಿನ ಕೆಲವು ಪ್ರದೇಶ ಕೂಡ ಮುಳುಗಡೆಯಾಗುತ್ತದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ? ತುಂಗ ಅಣೆಕಟ್ಟು ಏನಿದೆ ಅದನ್ನು 10—15 ಅಡಿಯಷ್ಟು ಏರಿಸಿದರೆ ಸಾಕಾಗುತ್ತದೆ ಎನ್ನುವ ಅಭಿಪ್ರಾಯ ಇರಾಖೆಯಿಂದ ಇರುವುದರಿಂದ, ತುಂಗ ಮೇಲ್ದಂಡೆ ಯೋಜನೆಯಿಂದ ಜಮೀನು ಮುಳುಗಡೆ ಯಾಗುವುದನ್ನು ತಪ್ಪಿಸಿ ತುಂಗ ಆಣೆಕಟ್ಟನ್ನು ಏರಿಸುತ್ತೀರಾ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕಟ್ಟತಕ್ಕ ಕಾಲದಲ್ಲಿ ಮಾನ್ಯ ಸದಸ್ಯರು ಹೇಳಿದಂಥ ಎಲ್ಲ ವಿಷಯಗಳನ್ನೂ ಗುಮನದಲ್ಲಿಟ್ಟುಕೊಂಡು ಎಷ್ಟು ಪ್ರಮಾಣದಲ್ಲಿ ನಷ್ಟವಾಗುತ್ತದೆ, ಎಷ್ಟು ಪ್ರಮಾಣದಲ್ಲಿ ಲಾಭವಾಗುತ್ತದೆ ಎಂಬುದನ್ನೆಲ್ಲ ಗುಮನಿಸಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಕೋಣಂದೂರು ಲಿಂಗಪ್ಪ.—ತೀರ್ಥಹಳ್ಳಿ ಮತ್ತು ಶೃಂಗೇರಿ ಇವೆರಡೂ ತಾಲ್ಲೂಕುಗಳಲ್ಲಿ ಬಹು ಬೆಲೆ ಬಾಳುವ ಪ್ರದೇಶ ಮುಳುಗಡೆಯಾಗುತ್ತದೆ. ಒಂದೇ ವೇಳೆ ಈ ಯೋಜನೆ ಆಗುವು ದಾದರೆ, ಅಲ್ಲಯ ಜನ ತುಂಗ ಮೇಲ್ದಂಡೆ ಯೋಜನೆಯನ್ನು ವಿರೋಧಿಸುವುದರ ಬಗ್ಗೆ ಒಂದೊಂದು ಕಲ್ಲಿಗೆ ಒಂದೊಂದು ಹೆಣ ಬಿದ್ದರೂ ಬಿಡುವುದಿಲ್ಲ ಎಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ಜನ ಹೇಳಿದರೂ ನಾವು ಪ್ರಗತಿ ಕಾರ್ಯವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಅವರು ಆಗಲೇ ಬೇಕು ಎಂದು ಹೋರಾಟ ಹೂಡಿದರೂ ಆಗದೆ ಇರತಕ್ಕ ಕೆಲಸವನ್ನು ತೆಗೆದುಕೊಳ್ಳುವುದಕ್ಕೂ ಆಗುವುದಿಲ್ಲ.

ಶ್ರೀ ಎಸ್. ಎಂ. ಚಂದ್ರಶೇಖರ್.—(ಇ) ಭಾಗಕ್ಕೆ ಹಣ ದೊರಕಿದಾಗ ಕೆಲಸವನ್ನು ತೆಗೆದು ಕೊಳ್ಳಲಾಗುತ್ತದೆ ಎಂದು ಹೇಳಿದ್ದಾರೆ. ಈ ಒಂದು ಸಣ್ಣ ನೀರಿಗೇ ಹಳ್ಳಕ್ಕೆ 10 ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಕೋಟಿಗಟ್ಟಲೆ ಹಣವಿರುವ ಬಜೆಟ್ಟಿನಲ್ಲಿ ಹಣ ದೊರಕುವುದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೃಷ್ಣ ನದಿ ನೀರಿನ ವಿವಾದ ಮುಗಿದ ಕೂಡಲೇ ನೀರು ನಮಗೆ ಎಷ್ಟು ಸಿಕ್ಕುತ್ತದೆ, ಮೊದಲನೇ ಪ್ರಾಧಾನ್ಯತೆ ಯಾವುದಕ್ಕೆ ಕೊಡಬೇಕು ಎರಡು, ಮೂರು, ನಾಲ್ಕನೇ ಪ್ರಾಧಾನ್ಯತೆ ಯಾವುದಕ್ಕೆ ಕೊಡಬೇಕು ಎಂದು ನಂದರ್ಭ ಒದಗಿದ ಕಾಲದಲ್ಲಿ ಪರಿಶೀಲನೆ ಮಾಡುವು ದಕ್ಕೆ ಸಾಧ್ಯ.

ಶ್ರೀ ಪಿ. ಎಂ. ಭಂಗಿ.—ಕೃಷ್ಣ ಗೋದಾವರಿ ಡಿಸ್ಪ್ಯೂಟ್ ಅನ್ನು ಟ್ರೈಬ್ಯುನಲ್‌ಗೆ ರೆಫರ್ ಮಾಡಿ ಎಷ್ಟು ವರ್ಷ ಆಯಿತು, ಈಗ ಯಾವ ಹಂತಕ್ಕೆ ಬಂದಿದೆ?

ಅಧ್ಯಕ್ಷರು.—ಈ ಉಪ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಎಸ್ ಎಂ. ಚಂದ್ರಶೇಖರ್.—ನಾನು ಕೇಳುತ್ತಾ ಇರುವುದು ಸೀಗೆಹಳ್ಳದ ಯೋಜನೆಯ ಬಗ್ಗೆ ಈ ಯೋಜನೆಗೆ 11·5 ಲಕ್ಷ ರೂಪಾಯಿ ಮಾತ್ರ ಖರ್ಚು ಮಾಡಬೇಕಾಗಿದೆ. ಕೋಟಿಗಟ್ಟಲೆ ರೂಪಾಯಿಗಳ ಬಡ್ಜೆಟ್ ಇರುವಾಗ 11.5 ಲಕ್ಷ ರೂಪಾಯಿಗಳನ್ನು ಒದಗಿಸುವುದಕ್ಕಾಗು ವುದಿಲ್ಲವೇ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಸೀಗೆ ಹಳ್ಳದ ಪ್ರಾಜೆಕ್ಟಿನಿಂದ 24 ಕೆರೆಗಳಿಗೆ ನೀರು ಒದಗಿಸಬೇಕಾಗಿದೆ. ಈ ಹಳ್ಳದಿಂದ 24 ಕೆರೆಗಳ ಪೈಕಿ ಕೆಲವು ಕೆರೆಗಳಿಗೆ ಹಲವಾರು ವರ್ಷ ಗಳಿಂದ ನೀರು ಸರಬರಾಜು ಆಗುತ್ತಾ ಇಲ್ಲ. ಮತ್ತೆ ಅಲ್ಲಲ್ಲಿ ಜನ ಒಡ್ಡು ಒಡೆದು ನೀರನ್ನು ತೆಗೆದುಕೊಳ್ಳುವುದರಿಂದ ಅಲ್ಲಿರುವ ಆಯ್ಕುಕಟ್ಟುದಾರರಿಗೆ ತೊಂದರೆಯಾಗುತ್ತದೆ ಎಂದು ಜನಗಳಿಂದ ಒತ್ತಡ ಬಂದಿದೆ. ಅದನ್ನು ಪರಿಶೀಲನೆ ಮಾಡಿ ಯಾವ ರೀತಿ ಪುನರ್‌ವ್ಯವಸ್ಥೆ ಮಾಡಿ 24 ಕೆರೆಗಳಿಗೆ ನೀರು ಒದಗಿಸಲಾಗದು ಮತ್ತು ಇಂಡಿಪೆಂಡೆಂಟ್ ಆಯ್ಕುಕಟ್ಟುದಾರರಿಗೆ ಯಾವ ರೀತಿ ನೀರಿನ ಗ್ಯಾರಂಟಿ ಕೊಡುವುದಕ್ಕೆ ಏನು ಮಾಡಬೇಕು ಎನ್ನುತಕ್ಕ ಸಾಧಕಭಾದಕಗಳನ್ನು ಯೋಚನೆ ಮಾಡು ತ್ತಿದ್ದೇವೆ. ಎರಡನೆಯದು, ಇದನ್ನು ಉತ್ತಮ ಪಡಿಸುವುದು ಸಾಧ್ಯವೇ, ಅದಕ್ಕೆ ಎಷ್ಟು ಖರ್ಚಾಗುತ್ತದೆ, ಅದಕ್ಕೆ ಪೆಲ್ಟಾಟ್ಟು ಅರ್ಧ ಮೈಲಿ ದೂರದಲ್ಲಿ ಅಣೆ ಕಟ್ಟು ಕಟ್ಟಿ ಸ್ಪೋರೇಜ್ ನಿರ್ಮಾಣಮಾಡಿ ಅದರಿಂದ ಹಳೆಯ ಆಯ್ಕುಕಟ್ಟುದಾರರಿಗೆ ನೀರು ಕೊಡುವುದು ಸಾಧ್ಯವೇ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ. ಆಗಲೇ ಹೇಳಿದಂತೆ ಸಮರ್ಪಕವಾಗಿ ಪರಿಶೀಲನೆ ಮಾಡಿ ಆದಷ್ಟು ಬೇಗ ರಿಲೀಫ್ ದೊರಕುವಂತೆ ವ್ಯವಸ್ಥೆ ಮಾಡಿಕೊಡುತ್ತೇವೆ.